

# ಟ್ರೆಲ್

## ಬರಹಕ್ಕೆ, ಗಳಿಕೆಗೆ ಹೊಸ ಆ್ಯಪ್



■ **ಶಶಿಕುಮಾರ್ ಸಿ.**

ಹಣ ಗಳಿಕೆಗೆ ಹಲವು ಆ್ಯಪ್‌ಗಳು ಹಾಗೂ ಬ್ಲಾಗ್‌ಗಳು ಪೂರಕ. ಮನೆಯಲ್ಲೇ ಕೂತು ಸಾವಿರಾರು ರೂಪಾಯಿ ಗಳಿಸಲು ಇವು ಉತ್ತಮ ಬರಹಗಾರರಿಗೆ ಅವಕಾಶ ಕಲ್ಪಿಸುತ್ತವೆ. ಅಂಥವುಗಳ ಪೈಕಿ 'ಟ್ರೆಲ್' (Trell) ಸಹ ಒಂದು. ಇದನ್ನು ಬ್ಲಾಗ್ ಮತ್ತು ಆ್ಯಪ್ ಎಂತಲೂ ಕರೆಯಬಹುದು. ಕನ್ನಡ ಹೊರತಾಗಿ ಬೇರೆ ಭಾಷೆಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಈ ಆ್ಯಪ್ ಸದ್ಯ ರಾಜ್ಯಕ್ಕೂ ಕಾಲಿಟ್ಟಿದೆ.

ಟ್ರೆಲ್ ವಿಶಿಷ್ಟವಾದ ಜೀವನ ಶೈಲಿ (ಲೈಫ್ ಸ್ಟೈಲ್) ಕೇಂದ್ರಿತ ಆ್ಯಪ್. ವಿಷಯಗಳನ್ನು ನೋಡಿದಂತೆ, ಕೇಳಿದಂತೆ ಬರೆಯುವುದು ಒಂದು ಕಲೆ. ಆ ಕಲೆಯನ್ನು ರೂಢಿಗತಗೊಳಿಸಿಕೊಂಡವರು ಟ್ರೆಲ್‌ನ ಬ್ಲಾಗ್‌ನಲ್ಲಿ ಮುಕ್ತವಾಗಿ ಬರೆಯಬಹುದು. ದೈನಂದಿನ ಆಗುಹೋಗುಗಳ ಬಗ್ಗೆಯೇ ನಡೆದದ್ದನ್ನು ನಡೆದಂತೆಯೇ ಬರೆಯಲು ಅಥವಾ ವಿಡಿಯೊ ಮಾಡಲು ವೇದಿಕೆ ಕಲ್ಪಿಸಲು ಈ ಆ್ಯಪ್ ರೂಪಿಸಲಾಗಿದೆ.

ಒಬ್ಬ ವ್ಯಕ್ತಿಯು ದೈನಂದಿನ ಬದುಕಿನ ಸ್ವಾರಸ್ಯಕರ ವಿಚಾರಗಳ ಬಗ್ಗೆ ಯಥವತ್ತಾಗಿ ಬರೆದು ಈ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಹಾಗೇ ಅಪ್‌ಲೋಡ್ ಮಾಡುವ ಬರಹಗಳ ವೀಕ್ಷಣೆ ಅಥವಾ ಓದುಗರ ಸಂಖ್ಯೆಯನ್ನು ಆಧರಿಸಿ ಸಂಸ್ಥೆಯು ಬರಹಗಾರರಿಗೆ ಇಂತಿಷ್ಟು ಹಣವನ್ನು ಪ್ರತಿ ತಿಂಗಳು ಸಂದಾಯ ಮಾಡುತ್ತದೆ. ಈಗಾಗಲೇ ಟ್ರೆಲ್‌ಗೆ ಸಾವಿರಾರು ಬರಹಗಾರರು ಬರೆಯುತ್ತಿದ್ದಾರೆ ಎಂದಿದೆ ಕಂಪನಿ.

ಇಂತಹದ್ದೇ ವಿಚಾರಗಳ ಬಗ್ಗೆ ಬರೆಯಬೇಕು ಎಂಬುದನ್ನು ಸಂಸ್ಥೆಯು ಪಟ್ಟಿ ಮಾಡಿದ್ದು, ಆಸಕ್ತರು ಆ ವಿಷಯಗಳ ಬಗ್ಗೆ ತಮ್ಮ ಸ್ವಂತ ಅನುಭವವನ್ನು ಸರಳವಾಗಿ ಸ್ವಾರಸ್ಯಕರವಾಗಿ ಅಕ್ಷರ ರೂಪದಲ್ಲಿ ಕಟ್ಟಿಕೊಡಬೇಕು. ಹಣ ಗಳಿಕೆಯ ಉದ್ದೇಶದಿಂದ ಬರೆಯುವ ಬರಹಗಾರರು ಓದುಗರ ಸಂಖ್ಯೆಯನ್ನು ಹೆಚ್ಚಿಸುವುದರ ಬಗ್ಗೆ ಗಮನಹರಿಸುವುದು ಉತ್ತಮ. ಅದಕ್ಕಾಗಿ ಆ ಬರಹದ ಲಿಂಕ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಓದುಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕು.

### ಯಾವ್ಯಾವ ವಿಷಯಗಳ ಬಗ್ಗೆ ಬರೆಯಬಹುದು?

ನಮ್ಮ ದೈನಂದಿನ ಬದುಕಿನ ಕಷ್ಟಗಳ ಕಥೆ, ಅಡುಗೆಗೆ ಹತ್ತಾರು ಟಿಪ್ಸ್, ಬ್ಯೂಟೀ ಟಿಪ್ಸ್, ಹೆಲ್ತ್ ಟಿಪ್ಸ್ ಮನೆ ಮದ್ದು, ಸದಾ ಕ್ರಿಯೇಟಿವ್ ಆಗಿರಲು ಏನು ಮಾಡಬಹುದು?, ಪ್ರವಾಸ ಅನುಭವ, ಬಸಿರು ಬಾಣಂತನದ ಕಥೆ, ಗಾರ್ಡನಿಂಗ್ ಟಿಪ್ಸ್, ಮಕ್ಕಳ ಕಾಳಜಿ ಟಿಪ್ಸ್, ವಿದ್ಯಾರ್ಥಿಗಳಿಗೆ ಸ್ವ ಅನುಭವದ ಸಲಹೆಗಳು, ಸೆಲ್ಫ್ ಮೋಟಿವೇಶನ್ ವಿಚಾರಗಳು, ಬದುಕಿನ ಕಹಿ ಅನುಭವಗಳು ಕಲಿಸಿದ ಪಾಠ, ಶಾಪಿಂಗ್ ಸಲಹೆ, ಕರೆಂಟ್ ಅಫೇರ್ಸ್ ನೀವು ಕಂಡಂತೆ, ನನ್ನ ಇಷ್ಟಗಳು ಮತ್ತು ಯಾಕೆ?, ಸದಾ ಕಾಡುವ ನೆನಪು, ಇದು ನನ್ನ ಲವ್ ಜರ್ನಿ, ನನ್ನ ಹಾಗೂ ನನ್ನವರ ಕನಸುಗಳು, ಸಾಮಾಜಿಕ ಜವಾಬ್ದಾರಿ ನನಗೆಷ್ಟಿದೆ, ಜಗದಲ್ಲಿ ಇನ್ನೂ ಪ್ರೀತಿ, ಮಾನವೀಯತೆ ಉಳಿದಿದೆ, ಇದು ನನ್ನ ಫ್ಯಾಷನ್ ಸೆನ್ಸ್, ಹೆಣ್ಣಿಗೆ ಮಾತ್ರಾ ಅರ್ಥವಾಗುವ ಕಷ್ಟಗಳಿವು, ಆಧ್ಯಾತ್ಮ ಬದುಕಿನ ನೆಮ್ಮದಿಗೆ ಪ್ರೇರಕ, ಡಯೆಟ್ ಟಿಪ್ಸ್, ಬಜೆಟ್‌ನಲ್ಲಿ ಬದುಕೋದು ಹೇಗೆ?.

### ಬರಹದ ನಿಯಮಗಳು

ಟ್ರೆಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಹೆಸರು ನೋಂದಾಯಿಸಿಕೊಳ್ಳಬೇಕು. ಬಳಿಕ ಕಂಪನಿಯ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಬರಹ ಬರೆಯಲು ಅನುಮತಿ ಪಡೆದುಕೊಳ್ಳಬೇಕು. ನಂತರ ಕಂಪನಿ ಕಡೆಯಿಂದ ಲಭ್ಯವಾಗುವ ಟ್ರೆಲ್‌ನ ಲಿಂಕ್‌ಗೆ ಭೇಟಿ ಕೊಟ್ಟು ಪ್ರಾರಂಭಿಕವಾಗಿ ಐದು ಬರಹಗಳನ್ನು ಬರೆಯಬೇಕು. ಆ ಐದೂ ಬರಹಗಳಿಗೆ ಒಟ್ಟು 5000 ವೀವ್ಸ್ ಲಭ್ಯವಾಗಲೇಬೇಕು. ಆ ವಿಧಾನದಲ್ಲಿ ಯಶಸ್ವಿಯಾದರೆ ಟ್ರೆಲ್ ಕಂಪನಿಯು ನಿಮ್ಮನ್ನು 'ಟ್ರೆಲ್ ಪ್ರೊ ರೈಟರ್' ಎಂದು ಪರಿಗಣಿಸಲಾಗುತ್ತದೆ. ಬಳಿಕ ಬರೆಯುವ ಬರಹಗಳ ವೀವ್ಸ್ ಮೇಲೆ ಪ್ರತಿ ತಿಂಗಳು ಹಣ ಸಂದಾಯ ಆಗುತ್ತದೆ.

ಪ್ರತಿ ಬರಹದಲ್ಲಿ 250 ಪದಗಳಿರುವಂತೆ ನೋಡಿಕೊಳ್ಳಬೇಕು. ಜೊತೆಗೆ ಆ ಬರಹದ ಜೊತೆಗೆ ಕಡ್ಡಾಯವಾಗಿ ಬರಹಕ್ಕೆ ಸಂಬಂಧಿಸಿದ ಐದು ಫೋಟೊಗಳನ್ನು ಅಪ್‌ಲೋಡ್ ಮಾಡಬೇಕು. ಆ ಫೋಟೊಗಳಲ್ಲಿ ಯಾವುದೇ ರೀತಿಯ ವಾಟರ್ ಮಾರ್ಕ್ ಇರುವಂತಿಲ್ಲ. ಇಲ್ಲಿ ಫಾಲೋ ಮಾಡುವವರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬಹುದು. ಲೇಖನಗಳನ್ನು ಬೇರೆ ಕಡೆಯಿಂದ ನಕಲು ಮಾಡುವಂತಿಲ್ಲ ಮತ್ತು ಟ್ರೆಲ್‌ಗೆ ಬರೆದ ಬರಹವನ್ನು ಬೇರೆಲ್ಲೂ ಬರೆಯುವಂತಿಲ್ಲ.

ಲಿಂಕ್: https://creatorsdev.trell.co/ ಈ ಲಿಂಕ್ ಕ್ಲಿಕ್ ಮಾಡಿ ಮತ್ತು ನಿಮ್ಮ ಟ್ರೆಲ್ ಖಾತೆಯನ್ನು ಆ್ಯಕ್ಟಿವ್ ಗೊಳಿಸಿ, ಲೇಖನಗಳನ್ನು ಬರೆಯಲು ಪ್ರಾರಂಭಿಸಬಹುದು.

ಸಂಪರ್ಕ ಸಂಖ್ಯೆ: 6366576550 / 6366576546